ಓಎಸ್.61/2022
ಪಿಡಬ್ಲ್ಯೂ-1

ದಿನಾಂಕ 31.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಶ್ರೀ ಡಿ.ಡಿ ವಕೀಲರಿಂದಃ-

ನಾನು ಹರಿಹರ ಗ್ರಾಮದಲ್ಲಿ ಖಾಯಂ ನಿವಾಸಿಯಾಗಿ ವಾಸವಾಗಿದ್ದೇನೆ. ವಾದಿ ನನ್ನ ಪತ್ನಿ. ವಾದಿಯು ಏನು ಪರಿಹಾರ ಕೋರಿ ದಾವೆ ಹೂಡಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾಸ್ವತ್ತಿನ ಸರ್ವೆ ನಂ. **163/2.** ದಾವಾಸ್ವತ್ತಿನ ಒಟ್ಟು ವಿಸ್ತೀರ್ಣ **58.50** ಸೆಂಟ್ಸ್ ಇದೆ. ದಾವಾಸ್ವತ್ತಿನ ಪೂರ್ವಕ್ಕೆ ಸಿ.ಎಸ್ ಕಾರ್ಯಪ್ಪ ರವರ ಜಮೀನು, ಪಶ್ಚಿಮಕ್ಕೆ ಮುಕ್ಕಟೀರ ಮೇದಪ್ಪ ರವರ ಜಮೀನು, ಉತ್ತರಕ್ಕೆ ಪ್ರತಿವಾದಿಯ ಜಮೀನು, ದಕ್ಷಿಣಕ್ಕೆ ಲವ ರವರ ಜಮೀನು ಇದೆ. ದಾವಾಸ್ವತ್ತಿನಲ್ಲಿ ಕೃಷಿ ವಂಡ ಇದೆ. ದಾವಾಸ್ವತ್ತಿನಿಂದ **2** ಕಿ. ಮೀ ದೂರದಲ್ಲಿ ಪೂರ್ವ ದಿಕ್ಕಿಗೆ ಲಕ್ಷ್ಮಣತೀರ್ಥ ನದಿ ಇದೆ. ಲಕ್ಷ್ಮಣತೀರ್ಥ ನದಿ ಮತ್ತು ದಾವಾಸ್ವತ್ತಿನ ಮಧ್ಯದಲ್ಲಿ ನಮ್ಮ ಕುಟುಂಬದವರಿಗೆ ಸೇರಿದ ಗದ್ದೆಯ ಜಮೀನುಗಳು ಇವೆ. ನಿ.ಪಿ **10** ರಲ್ಲಿ ಎತ್ತರವಾಗಿ ಕಾಣುವ ಪ್ರದೇಶ ಕೃಷಿ ವಂಡದ ಕಟ್ಟೆ, ನಾವು ದಾವಾಸ್ವತ್ತಿನಲ್ಲಿ ಕೃಷಿ ವಂಡವನ್ನು ಮಾಡಿದ ದಿನಾಂಕ ಮತ್ತು ಅದರ ವಿಸ್ತೀರ್ಣ ನನಗೆ ಈಗ ನೆನಪಿಲ್ಲ.

ಸಾಮಾನ್ಯವಾಗಿ ಗದ್ದೆಯ ಬದು ಎರಡೂವರೆ ಅಡಿ ವಿಸ್ತೀರ್ಣ ಇರುತ್ತದೆ. ನಿ.ಪಿ **11** ರಲ್ಲಿ ಕಾಣುವ ಗಿಡ ಮತ್ತು ಮರಗಳಿರುವ ಪ್ರದೇಶ ಹೊಳೆಯ ದಂಡೆ. ಪ್ರತಿವಾದಿಯ ಆಸ್ತಿಯ ಸರ್ವೆ ನಂಬರ್ ಹಾಗೂ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಗ್ರಾಮನಕಾಶೆಯಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ ನಮೂದು ಆಗಿರುವುದನ್ನು ನಾನು ನೋಡಿರುವುದಿಲ್ಲ. ಲಕ್ಷ್ಮಣ ತೀರ್ಥ ಹೊಳೆಯ ಪಕ್ಕದಲ್ಲಿ ನಮಗೆ ಸೇರಿದ ಗದ್ದೆ ಜಮೀನು ಇದೆ ಅದರ ಸರ್ವೆ ನಂಬರ್ ನನಗೆ ಈಗ ನೆನಪಿಲ್ಲ. ಗದ್ದೆಯಲ್ಲಿ ಈ ಹಿಂದೆ ಭತ್ತ ಬೆಳೆಯುತ್ತಿದ್ದು, ಈಗ ಅಡಕೆ ಸಸಿ ಹಾಕಿದ್ದೇವೆ. ದಿನಾಂಕ **01.09.2019** ರಂದು ನಾವು ಹೊಳೆಯ ಕಡೆ ಹೋಗಬಾರದೆಂದು

ಓಎಸ್.61/2022
ಪಿಡಬ್ಲ್ಯೂ-1

ಪ್ರತಿವಾದಿಯು ನಮ್ಮ ಜಮೀನಿನಲ್ಲಿ ತಂತಿ ಬೇಲಿ ಹಾಕಿದ್ದಕ್ಕೆ ಸಂಬಂಧಿಸಿದಂತೆ ವಾದಪತ್ರದಲ್ಲಿ ದಿನಾಂಕ **01.09.2019** ನ್ನು ನಮೂದಿಸಲಾಗಿದೆ. ದಿನಾಂಕ **21.6.2022** ರಂದು ಪ್ರತಿವಾದಿಯ ವಿರುದ್ಧ ನಾವು ಶ್ರೀಮಂಗಲ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೆವು. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪ್ರತಿವಾದಿಯು ತನ್ನ ಜಮೀನಿನಲ್ಲಿ ಸ್ವಲ್ಪ ಭಾಗದಲ್ಲಿ ಅಡಿಕೆ ಗಿಡ ಹಾಕಿ ಉಳಿದ ಸ್ವಲ್ಪ ಜಾಗದಲ್ಲಿ ಕೃಷಿ ಹೊಂಡ ಮಾಡಿ, ಉಳಿಕೆ ಜಾಗದಲ್ಲಿ ಭತ್ತ ಬೆಳೆಯುತ್ತಿದ್ದಾರೆ ಎಂದರೆ ಸರಿ. ನಿ.ಪಿ **10** ರ ಕಾಲುವೆಯ ಪಕ್ಕದಲ್ಲಿ ಉಳುಮೆ ಮಾಡಿರುವ ಜಾಗದಲ್ಲಿ ಪ್ರತಿವಾದಿಯು ಭತ್ತ ಬೆಳೆಯುತ್ತಾರೆ ಎಂದರೆ ಸರಿ. ಪ್ರತಿವಾದಿಯು ತನ್ನ ಜಮೀನಿನ ಮೇಲ್ಭಾಗದಿಂದ ಬರುವ ನೀರು ಹೋಗಲು ತನ್ನ ಗದ್ದೆಯ ಪಕ್ಕ ಕಾಲುವೆ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಕೃಷಿ ಹೊಂಡಕ್ಕೆ ತೊಂದರೆ ಮಾಡಿ ಕಾಲುವೆ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಿ.ಪಿ **10** ರಲ್ಲಿ ಕಾಣುವ ಕಾಲುವೆ ಸರ್ವೆ ನಂ. **163/7** ರಲ್ಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ತಿಳಿಸಿರುವಂತೆ ಪ್ರತಿವಾದಿಯು ಬೇಲಿ ಹಾಕಿರುವ ಬಗ್ಗೆ ನಿ.ಪಿ **10** ರಲ್ಲಿ ಕಾಣುವುದಿಲ್ಲ ಎಂದರೆ ಸಾಕ್ಷಿಯು ನಿ.ಪಿ **11** ರಲ್ಲಿ ಕಾಣುತ್ತದೆ ಎಂದು ಉತ್ತರಿಸಿರುತ್ತಾರೆ. ಕೃಷಿ ಹೊಂಡದ ಕಟ್ಟೆ ಅಂದಾಜು **7** ಅಡಿ ಅಗಲ ಇರುತ್ತದೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.